C.R.P.67

| Form No.4<br>(Criminal)<br>Deposition<br>Sheets<br>(R.P.No.57) |
|---|

# 5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ

## ಸ್ಪೆಷಲ್ ಕೇಸ್ ನಂಬರ್: 178/2021

**ಚಾ.ಸಾ.–16 ಫ್ರಾ.ಸಾ.–8**

| | |
|---|---|
| **ಸಾಕ್ಷಿದಾರರ ಹೆಸರು** | **ಸಂದೇಶ್ ಕುಮಾರ್ ಎಸ್ ಎಲ್** |
| **ತಂದೆಯ ಹೆಸರು** | **ನಾಗರಾಜು** |
| **ವಯಸ್ಸು** | **49 ವರ್ಷಗಳು** |
| **ಉದ್ಯೋಗ** | **ಅಸಿಸ್ಟೆಂಟ್ ಡೈರೆಕ್ಟರ್ , ಕರ್ನಾಟಕ ಪೊಲೀಸ್ ಅಕಾಡೆಮಿ , ಮೈಸೂರು** |
| **ವಾಸ** | **ಮೈಸೂರು** |

**ದಿನಾಂಕ: 23.03.2026 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ: ವಿಶೇಷ ಸರ್ಕಾರಿ ಅಭಿಯೋಜಕರವರಿಂದ**

1. ನಾನು 02.04.2021 ರಿಂದ 26.01.2023 ರವರಗೆ ಶ್ರೀರಂಗಪಟ್ಟಣ ಉಪ ವಿಭಾಗದಲ್ಲಿ ಪೋಲೀಸ್ ಉಪ ಅಧಿಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಮೇಲುಕೋಟೆ ಪೋಲೀಸ್ ಠಾಣೆ ಶ್ರೀರಂಗಪಟ್ಟ ಉಪ ವಿಭಾಗದ ಸರಹದ್ದಿನಲ್ಲಿ ಬರುತ್ತದೆ.

2. ದಿ: 16.06.2021 ರಂದು ಈ ಪ್ರಕರಣದ ಕಡತವನ್ನು ಮಾನ್ಯ ಮಂಡ್ಯ ಪೋಲೀಸ್ ಅಧೀಕ್ಷಕರ ಆದೇಶದಂತೆ ಚಾಸಾ– 15 ರವರಿಂದ ಪಡೆದುಕೊಂಡು ತನಿಖೆ ಮುಂದುವರೆಸಿರುತ್ತೇನೆ. ಸದರಿ ಆದೇಶವನ್ನು ಈಗ ನೋಡುತ್ತಿದ್ದು ಅದನ್ನು **ನಿಪಿ–15** ಎಂದು ಗುರುತಿಸಲಾಗಿದೆ, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ–15(ಎ)** ಎಂದು ಗುರುತಿಸಲಾಗಿದೆ. ನಂತರ ದಿನಾಂಕ: 17.06.2021 ರಂದು ಈ ಪ್ರಕರಣದ ಕೃತ್ಯ ಸ್ಥಳವಾದ ಪಾಂಡವಪುರ ತಾಲ್ಲೂಕು ಅತ್ತಿಗಾನಹಳ್ಳಿ ಗ್ರಾಮದ ಸರ್ವೇ ನಂ. 41/ಪಿ 2 ರಲ್ಲಿರುವ ಸುಂದರಮ್ಮ ರವರ ಜಮೀನಿನಲ್ಲಿ ಚಾಸಾ– 5 ಮತ್ತು 6

ರವರನ್ನು ಬರಮಾಡಿಕೊಂಡು ಅವರ ಸಮಕ್ಷಮ ಚಾಸಾ- 1 ತೋರಿಸಿಕೊಟ್ಟಂತೆ ಮಹಜರನ್ನು ಜರುಗಿಸಿದ್ದು ಸದರಿ ಮಹಜರನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ –2 ಎಂದು ಗುರುತಿಸಲಾಗಿದೆ, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ–2(ಸಿ)** ಎಂದು ಗುರುತಿಸಲಾಗಿದೆ. ನಂತರ ಮಹಜರ್ ಕ್ರಮದ ಬಗ್ಗೆ ನಿಪಿ–3 ರಂತೆ ಫೋಟೋಗಳನ್ನು ತೆಗೆಸಿರುತ್ತೇನೆ. ಮಹಜರನ್ನು ಬೆಳಿಗ್ಗೆ 10.00 ರಿಂದ 10.45 ರವರಗೆ ಜರುಗಿಸಿರುತ್ತೇನೆ. ನಂತರ ಚಾಸಾ- 1 ರವರ ಮುಂದುವರೆದ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಚಾಸಾ–2 ,3 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಚಾಸಾ– 3 ರವರು ನನ್ನ ಮುಂದೆ ನಿಪಿ–10 ರಂತೆ ಹೇಳಿಕೆಯನ್ನು ನೀಡಿರುತ್ತಾರೆ.

3. ನಂತರ ಅದೇ ದಿನ ಚಾಸಾ– 15 ರವರಿಗೆ ಆರೋಪಿತರನ್ನು ಪತ್ತೆ ಹಚ್ಚಿ ನನ್ನ ಮುಂದೆ ಹಾಜರುಪಡಿಸುವಂತೆ ಮೌಖಿಕ ಆದೇಶವನ್ನು ನೀಡಿರುತ್ತೇನೆ. ಅದರಂತೆ ಅದೇ ದಿನ ಚಾಸಾ- 15 ರವ ರು 1 ನೇ ಆರೋಪಿಯನ್ನು 9.30 ಗಂಟೆಗೆ ಪತ್ತೆ ಹಚ್ಚಿ ಬೆಳಿಗ್ಗೆ ನನ್ನ ಮುಂದೆ ವರದಿಯೊಂದಿಗೆ ಹಾಜರುಪಡಿಸಿರುತ್ತಾರೆ. ಸದರಿ ವರದಿಯನ್ನು ಈಗ ನೋಡುತ್ತಿದ್ದು ಅದನ್ನು **ನಿಪಿ– 16** ಎಂದು ಸಾಕ್ಷಿಯ ಸಹಿಯನ್ನು ನಿಪಿ–**16(ಎ)** ಎಂದು ಗುರುತಿಸಲಾಗಿದೆ. ಸದರಿ ಆರೋಪಿಯನ್ನು ವಿಚಾರಣಗೆ ಒಳಪಡಿಸಿ ದಸ್ತಗಿರಿ ಕ್ರಮ ಜರುಗಿಸಿ ದಸ್ತಗಿರಿ ಮಾಡಿರುತ್ತೇನೆ. ಸದರಿ ಆರೋಪಿ ಈ ದಿನ ನ್ಯಾಯಾಲಯದ ಮುಂದೆ ಹಾಜರಿದ್ದಾರೆ. ನಂತರ ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ನ್ಯಾಯಾಂಗ ಬಂಧನಕ್ಕೆ ಒಳಪಡಿಸಿರುತ್ತೇನೆ. ನಂತರ ಚಾಸಾ– 11, 13, 14 ರವರ ಹೇಳಿಕೆಗಳನ್ನು ದಾಖಲಿಸಿರುತ್ತೇನೆ.

4. ದಿಃ 18.06.2021 ರಂದು ಈ ಪ್ರಕರಣದ ಆರೋಪಿತರು ಮತ್ತು ಚಾಸಾ– 1 ಮತ್ತು 2 ರವರ ಜಾತಿ ಪ್ರಮಾಣ ಪತ್ರವನ್ನು ಒದಗಿಸುವಂತೆ ಕೋರಿಕೆಯನ್ನು ಸಲ್ಲಿಸಿ ನಿಪಿ– 6 ರಂತೆ ಜಾತಿ ಪ್ರಮಾಣಪತ್ರವನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಕೃತ್ಯ ಸ್ಥಳದ ಆರ್ ಟಿ ಸಿ ಹಾಗೂ ಎಂ ಆರ್ ಗಳನ್ನು ಒದಗಿಸುವಂತೆ ಚಾಸಾ– 7 ರವರಿಗೆ ಕೋರಿಕೆಯನ್ನು ಸಲ್ಲಿಸಿರುತ್ತೇನೆ. ಸದರಿ ಕೋರಿಕೆಯನ್ನು ಈಗ ನೋಡುತ್ತಿದ್ದು ಅದನ್ನು **ನಿಪಿ– 17** ಎಂದು ಸಾಕ್ಷಿಯ ಸಹಿಯನ್ನು ನಿಪಿ–**17(ಎ)** ಎಂದು ಗುರುತಿಸಲಾಗಿದೆ. ಅದರಂತೆ ಚಾಸಾ– 17 ರವರು ನೀಡಿರುವ ಆರ್ ಟಿ ಸಿ , ಎಂ ಆರ್ ಮತ್ತು ಗ್ರ್ಯಾಂಟ್ ಸರ್ಟಿಫಿಕೇಟ ನ್ನು ಪಡೆದುಕೊಂಡಿರುತ್ತೇನೆ. ಸದರಿ ಆರ್ ಟಿ

ಸಿ ಮತ್ತು ಎಂ ಆರ್ ಗಳನ್ನು ನೋಡುತ್ತಿದ್ದು ಅವುಗಳನ್ನು ಈಗಾಗಲೇ ನಿಪಿ– 4 ಮತ್ತು 5 ಎಂದು ಗುರುತಿಸಲಾಗಿದೆ. ಗ್ರ್ಯಾಂಟ್ ಸರ್ಟಿಫಿಕೇಟ ನ್ **ನಿಪಿ– 18** ಎಂದು ಗುರುತಿಸಲಾಗಿದೆ. ನಂತರ ಅದೇ ದಿನ ಚಾಸಾ– 10 ರವರಿಗೆ ಚಾಸಾ– 2 ರವರ ಗಾಯದ ಪ್ರಮಾಣಪತ್ರವನ್ನು ಒದಗಿಸುವಂತೆ ಕೋರಿಕೆಯನ್ನು ಸಲ್ಲಿಸಿ ನಿಪಿ– 11 ಮತ್ತು 12 ದಾಖಲೆಗಳನ್ನು ಪಡೆದುಕೊಂಡಿರುತ್ತೇನೆ. ನಂತರ ಚಾಸಾ– 8 ರವರಿಗೆ ಕೃತ್ಯ ಸ್ಥಳದ ನಕ್ಷೆಯನ್ನು ತಯಾರಿಸುವಂತೆ ನಿಪಿ– 7 ಕೋರಿಕೆಯನ್ನು ಸಲ್ಲಿಸಿ ಅವರಿಂದ ನಿಪಿ– 8 ನಕ್ಷೆಯನ್ನು ಪಡೆದುಕೊಂಡಿರುತ್ತೇನೆ.

5. ದಿನಾಂಕಃ 23.06.2021 ರಂದು ಚಾಸಾ– 1 ರವರ 164 ಸಿ ಆರ್ ಪಿ ಸಿ ಹೇಳಿಕೆಯನ್ನು ದಾಖಲಿಸಲು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡು ಹೇಳಿಕೆ ಪ್ರತಿಯನ್ನು ಸ್ವೀಕರಿಸಿರುತ್ತೇನೆ. ಅದನ್ನು ಈಗ ನೋಡುತ್ತಿದ್ದು ಈಗ ನೋಡುತ್ತಿದ್ದು ಅದನ್ನು **ನಿಪಿ– 19** ಎಂದು ಸಾಕ್ಷಿಯ ಸಹಿಯನ್ನು ನಿಪಿ–**19(ಎ)** ಎಂದು ಗುರುತಿಸಲಾಗಿದೆ. ಅದೇ ದಿನ ಚಾಸಾ– 4 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ಈ ಪ್ರಕರಣದ ತನಿಖಾ ವೇಳೆಯಲ್ಲಿ ತನಿಖೆಗೆ ಸಂಬಂಧಿಸಿದಂತೆ ತೆಗೆದಿರುವ ಪೋಟೋಗಳಿಗೆ ಸಂಬಂಧಪಟ್ಟಂತೆ 65 ಬಿ ಪ್ರಮಾಣಪತ್ರವನ್ನು ನೀಡಿರುತ್ತೇನೆ. ಈಗ ನೋಡುತ್ತಿದ್ದು ಅದನ್ನು **ನಿಪಿ– 20**ಎಂದು ಸಾಕ್ಷಿಯ ಸಹಿಯನ್ನು ನಿಪಿ–20**(ಎ)** ಎಂದು ಗುರುತಿಸಲಾಗಿದೆ.

6. ಆರೋಪಿ 2 , 3 ಮತ್ತು 4 ರವರು ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದು ನನ್ನ ಮುಂದೆ ಹಾಜರಾಗಿದ್ದು ಸದರಿಯವರನ್ನು ವಿಚಾರಣೆಗೆ ಒಳಪಡಿಸಿ ದಸ್ತಗಿರಿ ಕ್ರಮ ಜರುಗಿಸಿ ದಸ್ತಗಿರಿ ಮಾಡಿ ನ್ಯಾಯಾಲಯದ ಆದೇಶದ ಮೇರೆಗೆ ಜಾಮೀನಿನ ಮೇರೆಗೆ ಬಿಡುಗಡೆ ಮಾಡಿರುತ್ತೇನೆ. ಸದರಿ ಆರೋಪಿತರನ್ನು ಗುರುತಿಸಬಲ್ಲೆ. ((learned Counsel for Accused submits that there is no identity dispute with respect to accused). ಚಾಸಾ–1 ರವರ ಈ ಹಿಂದೆ ಮೇಲುಕೋಟೆ ಪೊಲೀಸ್ ಠಾಣೆಯಲ್ಲಿ ದಿನಾಂಕಃ 27.04.2021 ರಂದು ನೀಡಿದ ದೂರು ಅರ್ಜಿ ಮತ್ತು ಇತರೆ ದಾಖಲೆಗಳನ್ನು ಮೇಲುಕೋಟೆ ಪೊಲೀಸ್ ಠಾಣಾ ಅಧಿಕಾರಿಗಳಿಂದ ದೃಡೀಕರಿಸಿ ಪಡೆದುಕೊಂಡಿರುತ್ತೇನೆ. ಅವುಗಳನ್ನು ಈಗ ನೋಡುತಿದ್ದು ಒಟ್ಟಾಗಿ **ನಿಪಿ– 21**

ಎಂದು ಗುರುತಿಸಲಾಗಿದೆ. ನಂತರ ತನಿಖೆಯನ್ನು ಪೂರೈಸಿ ಆರೋಪಿತರ ವಿರುದ್ಧ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್ ಪಿ ವಕೀಲರಿಂದ:**

7. ಅತ್ತಿಗಾನಹಳ್ಳಿ ಗ್ರಾಮದಿಂದ ಘಟನೆ ನಡೆದಿದೆ ಎನ್ನುವ ಸ್ಥಳ ಸುಮಾರು 2 ಕಿ.ಮೀ. ದೂರ ಇದೆ. ಘಟನಾ ಸ್ಥಳಕ್ಕೆ ವಾಹನಗಳು ಮತ್ತು ಎತ್ತಿನ ಗಾಡಿ ಹೋಗಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಸರ್ವೇ ನಂ. 41/ಪಿ2 ರ ಜಮೀನು ಇದೆ ಎಂದು ತೋರಿಸುವ ತಹಶೀಲ್ದಾರ್ ಕಛೇರಿಯ ನಕ್ಷೆಯನ್ನು ನಾನು ನೋಡಿರುವುದಿಲ್ಲ. ಚಾಸಾ– 7 ರವರ ಸ್ಥಳಕ್ಕೆ ಭೇಟಿ ನೀಡಿ ಘಟನೆ ನಡೆದಿದೆ ಎನ್ನುವ ಸರ್ವೇ ನಂ. 41/ಪಿ2 ರ ಜಮೀನು ಚಾಸಾ– 1 ರವರದ್ದು ಎಂದು ಖಚಿತಪಡಿಸಿರುತ್ತಾರೆ. ಅದಕ್ಕೆ ಸಂಬಂಧಪಟ್ಟಂತೆ ಚಾಸಾ– 7 ರವರು ನಿಪಿ– 4, 5 ಮತ್ತು 18 ದಾಖಲೆಗಳನ್ನು ನೀಡಿರುತ್ತಾರೆ. ಸದರಿ ದಾಖಲೆಗಳನ್ನು ಸ್ಥಳಕ್ಕೆ ಭೇಟಿ ನೀಡಿದ ನಂತರ ನೀಡಿರುತ್ತಾರೆ. ನಿಪಿ– 4,5 ಮತ್ತು 18 ದಾಖಲೆಗಳಿಗೂ ಚಾಸಾ– 1 ರವರಿಗೆ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಅವುಗಳನ್ನು ಸುಳ್ಳಾಗಿ ಸೃಷ್ಟಿ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಮಹಜರ್ ಗಾಗಿ ಭೇಟಿ ನೀಡಿದಾಗ ಘಟನೆ ನಡೆದಿದೆ ಎನ್ನುವ ಸ್ಥಳದಲ್ಲಿ ಉಳುಮೆ ನಡೆದಿದೆ ಎಂದು ತೋರಿಸಲು ಟ್ರ್ಯಾಕ್ಟರ್ ನಿಂದ ಉಳುಮೆ ಮಾಡಿರುವ ಗುರುತುಗಳು ಇದ್ದವು. ಅಲ್ಲಿ ಯಾವುದೇ ಟ್ರ್ಯಾಕ್ಟರ್ ಆ ಸಮಯ ಇರಲಿಲ್ಲ. ನಿಪಿ– 2 ಮಹಜರ್ ನ್ನು ನನ್ನ ಕಚೇರಿಯಲ್ಲಿಯೇ ಸುಳ್ಳಾಗಿ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರ ಸಹಿಗಳನ್ನು ಸಹ ನನ್ನ ಕಚೇರಿಯಲ್ಲಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

8. ಘಟನೆ ನಡೆದಿದೆ ಎನ್ನುವ ಸ್ಥಳದ ಅಕ್ಕಪಕ್ಕದಲ್ಲಿ 1 ನೇ ಆರೋಪಿಯ ಜಮೀನು ಇದೆ ಎಂದರೆ ಸರಿ . ಘಟನೆ ನಡೆದಿದೆ ಎನ್ನುವ ಜಮೀನಿನ ಸುತ್ತಮುತ್ತಲಿನ ಜಮೀನಿನಲ್ಲಿ ವ್ಯವಸಾಯ ಮಾಡುವ ಆಳುಗಳು ಇರುತ್ತಾರೆ ಎಂದರೆ ಮಹಜರ್ ಸಮಯ ಯಾರೂ ಇರಲಿಲ್ಲ . ನಾನು ಸರ್ವೇ ನಂ . 41/ಪಿ2 ಜಮೀನಾಗಲೀ ಅದರ ಸುತ್ತಮುತ್ತಲಿನ ಜಮೀನಿನಿನಾಗಲೀ ಭೇಟಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ– 3 ಫೋಟೊಗಳನ್ನು ಈ ಪ್ರಕರಣಕ್ಕೆ ಅನುಕೂಲವಾಗುವಂತೆ ಸೃಷ್ಟಿ

ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ– 3 ರವರು ನನ್ನ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

9. ಚಾಸಾ– 2 ರವರು ನನ್ನ ಮುಂದೆ ಹೇಳಿಕೆ ನೀಡುವಾಗ ಘಟನೆ ನಡೆದಿದೆ ದಿನದ ಪೂರ್ವದಲ್ಲಿಯೇ ಮುರಿದುಹೋಗಿದ್ದವು ಎಂದು ಹೇಳಿರುತ್ತಾರೆ. ನಿಪಿ– 11 ಗಾಯದ ಪ್ರಮಾಣಪತ್ರದಲ್ಲಿ ಚಾಸಾ– 2 ರವರ ಮೈಮೇಲೆ ಯಾವುದೇ ಕಣ್ಣಿಗೆ ಕಾಣಿಸುವಂತಹ ಗಾಯಗಳು ಇರುವುದಾಗಿ ನಮೂದು ಇಲ್ಲ ಎಂದರೆ ಸರಿ . ಅತ್ತಿಗಾನಹಳ್ಳಿ ಗ್ರಾಮದಿಂದ ಮೇಲುಕೋಟೆ ಎಷ್ಟು ದೂರ ಎಂದು ನನಗೆ ನೆನಪಿಲ್ಲ. ಅತ್ತಿಗಾನಹಳ್ಳಿ ಗ್ರಾಮದಿಂದ ಮೇಲುಕೋಟೆ ಮಧ್ಯೆ ಯಾವುದಾದರೂ ಆಸ್ಪತ್ರೆಗಳು ಇರುವ ಬಗ್ಗೆ ನನಗೆ ನೆನಪಿಲ್ಲ. ಚಾಸಾ– 2 ರವರಿಗೆ ಯಾವುದೇ ಹಲ್ಲೆಯಾಗಿರುವುದಿಲ್ಲ, ಆದಕಾರಣ ಯಾವುದೇ ಗಾಯವಾಗಿರುವುದಿಲ್ಲ ಎಂದರೆ ಸರಿಯಲ್ಲ. ಸರ್ಕಾರದಿಂದ ಪರಿಹಾರದ ಹಣವನ್ನು ಪಡೆಯುವ ಸಲುವಾಗಿ ಚಾಸಾ– 2 ರವರ ಹೆಸರಿನಲ್ಲಿ ಸುಳ್ಳು ಗಾಯದ ಪ್ರಮಾಣಪತ್ರವನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಯಾವುದೇ ಸಾಕ್ಷಿದಾರರು ನನ್ನ ಮುಂದೆ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರದು ಎಂದು ಸುಳ್ಳು ಹೇಳಿಕೆಗಳನ್ನು ಈ ಪ್ರಕರಣಕ್ಕೆ ಅನುಕೂಲವಾಗುವಂತೆ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

10. ಚಾಸಾ– 15 ರವರು 1 ನೇ ಆರೋಪಿಯನ್ನು ವಶಕ್ಕೆ ಪಡೆದು ನನ್ನ ಮುಂದೆ ಹಾಜರುಪಡಿಸಿರುವುದೇ ಇಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿ ನನ್ನ ಮುಂದೆ ಸ್ವತಃ ಹಾಜರಾಗಿರುತ್ತಾರೆ ಎಂದರೆ ಸರಿಯಲ್ಲ. ನಿಪಿ– 21 ದಾಖಲೆಗಳನ್ನು ಪರಿಶೀಲಿಸಿದಾಗ ಸದರಿ ಪ್ರಕರಣ ಸಿವಿಲ್ ಸ್ವರೂಪದ ಪ್ರಕರಣ ಎಂದು ನನಗೆ ಮನವರಿಕೆಯಾಗಿರುತ್ತದೆ ಎಂದರೆ ಸರಿ. ಸದರಿ ದಾಖಲೆಗಳ ಆಧಾರದ ಮೇಲೆ ಚಾಸಾ– 1 ರವರು ಸುಳ್ಳು ದೂರನ್ನು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ತನಿಖೆಯಿಂದ ಆರೋಪಿತರು ಯಾವುದೇ ಆರೋಪಿ ಎಸಗಿರುವುದಿಲ್ಲ ಎಂದು ನನಗೆ ಮನವರಿಕೆಯಾಗಿರುತ್ತದೆ ಎಂದರೆ ಸರಿಯಲ್ಲ. ಆದರೂ ಸಹ ಚಾಸಾ– 1 ರವರ ಒತ್ತಡಕ್ಕೆ ಮಣಿದು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ದೋಷಾರೋಪಣೆ ಪತ್ರವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರಿಗೆ ತೊಂದರೆ ಕೊಡುವ ಸಲುವಾಗಿ ಹಾಗೂ ಚಾಸಾ– 1 ರವರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ದೋಷಾರೋಪಣೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ– 1 ರವರಿಗೆ

ಸರ್ಕಾರದಿಂದ ಯಾವುದೇ ಗ್ರ್ಯಾಂಟ್ ಸರ್ಟಿ ಫಕೇಟ್ ಸರ್ವೇ ನಂ. 41/ಪಿ2 ಕ್ಕೆ ಸಂಬಂಧಪಟ್ಟಂತೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಅದಕ್ಕೆ ಸಂಬಂಧಪಟ್ಟಂತೆ ದಾಖಲೆಗಳನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ ಎಂದು ನುಡಿಯುತ್ತಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಮಂಜುಳಾ ಇಟ್ಟಿ)**
**5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ**
**ನ್ಯಾಯಾಲಯ, ಮಂಡ್ಯ**